**ಮೇ: ದಿವಾಣಿ ನ್ಯಾಯಾಧೀಶರು ಮತ್ತು ಮೋಟಾರು ವಾಹನದ ನ್ಯಾಯಾಧೀಕರಣ ಮತ್ತು ಸದಸ್ಯರು ಮೋಟಾರು ವಾಹನ ಅಪಘಾತ ಪರಿಹಾರ ನ್ಯಾಯಾಧಿಕರಣ ಶಿಗ್ಗಾಂವ ಹಾಗೂ ಸಂಚಾರಿ ನ್ಯಾಯಾಲಯ ಸವಣೂರು.**

ಉಪಸ್ಥಿತರು: ಶ್ರೀ ವಿಜಯಕುಮಾರ ಕನ್ನೂರ.
ಬಿ.ಎ.,ಎಲ್‌ಎಲ್‌ಬಿ., (ಸ್ಪೆ)

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,
ಶಿಗ್ಗಾಂವ, ಪೀಠಾಸೀನ ಸ್ಥಳ: ಸವಣೂರು.

**ಎಮ್ ವಿ ಸಿ ನಂ. 693/2018**

**ದಿನಾಂಕ: 13 ನೇ ಡಿಸೆಂಬರ್ 2019**

ಅರ್ಜಿದಾರ : ಶ್ರೀ ವಿನಾಯಕ ಉರ್ಫ ವಿನಯಕುಮಾರ ತಂದೆ ರುದ್ರಪ್ಪ ತೆಂಬದಮನಿ
ವಯಾ: 25 ವರ್ಷ, ಉ: ಇಂಜನಿಯರಿಂಗ್ ವಿದ್ಯಾರ್ಥಿ,
ಸಾ: ದಂಡಿನ ಪೇಟೆ, ಸವಣೂರ,
ತಾ: ಸವಣೂರ, ಜಿ: ಹಾವೇರಿ.

(ಅರ್ಜಿದಾರರ ಪರವಾಗಿ ಶ್ರೀ ಎಸ್ ಕೆ ಎ.,
ನ್ಯಾಯವಾದಿಗಳು)

- - ವಿರುದ್ಧ - -

ಎದುರುದಾರರು: 1. ಶ್ರೀ ರಮೇಶ ತಂದೆ ಫಕ್ಕೀರಪ್ಪ ಶಿರುಂದ
ವಯಾ: 50 ವರ್ಷ, ಉ: ವ್ಯಾಪಾರ,
ಸಾ: ಲಕ್ಷ್ಮಾಪುರ, ಪೊ: ಜೊಯಶರಹಳ್ಳಿ,
ತಾ: ರಾಣೆಬೆನ್ನೂರ, ಜಿ: ಹಾವೇರಿ.

(ಟ್ರ್ಯಾಕ್ಸ್ ತೂಫಾನ ವಾಹನ ನೊಂದಣಿ ಸಂಖ್ಯೆ
ಕೆಎ 16 / ಬಿ - 7583 ನೇದ್ದರ ಈಗೀನ ಮಾಲೀಕರು)

2. ಅಧಿಕೃತ ಅಧಿಕಾರಯುತ ಒಪ್ಪಂದ ಕಕ್ಷಿಗಾರ
ಶ್ರೀರಾಮ ಜನರಲ್ ಇನ್ಸುರನ್ಸ ಕಂಪನಿ ಲಿಮಿಟೆಡ್,
ಇ-8, ಇಪಿಆಯ್‌ಪಿ, ಆರ್‌ಆಯ್‌ಸಿಓ ಇಂಡಸ್ಟ್ರಿಯಲ್ ಏರಿಯಾ,
ಸೀತಾಪುರ, ಜೈಪುರ, ರಾಜಸ್ಥಾನ ರಾಜ್ಯ.

ಪಾಲಸಿ ನಂ.10003/31/17/585527
ದಿನಾಂಕ 27-02-2017 ರಿಂದ 26-02-2018.

(1 ಮತ್ತು ನೇ ಎದುರುದಾರರು
ಏಕತರ್ಫಿಯಾಗಿರುವರು)

## ತೀರ್ಪು

ಸದರಿ ಅರ್ಜಿದಾರ ಮೋಟಾರು ವಾಹನ ಕಾಯ್ದೆ 1988 ಹಾಗೂ ತಿದ್ದುಪಡಿ ಕಾಯ್ದೆ 1994 ರ ಕಲಂ 166 ರಡಿ ರಸ್ತೆ ಅಪಘಾತದಲ್ಲಿ ಆದ ಗಾಯಗಳಿಗೆ ರೂ. 11,90,000-00 ಗಳ ಪರಿಹಾರವನ್ನು ಶೇಕಡಾ 18 ರಂತೆ ಬಡ್ಡಿ ಕೋರಿ ಸದರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

## ಅರ್ಜಿಯ ಸಂಕ್ಷಿಪ್ತ ವಿವರಣೆ

2. ಅರ್ಜಿದಾರರು ತಮ್ಮ ಹಕ್ಕೊತ್ತಾಯದ ಅರ್ಜಿಯಲ್ಲಿ, ದಿನಾಂಕಃ 27-05-2017 ರಂದು ಮುಂಜಾನೆ 10-00 ಗಂಟೆಯ ಸುಮಾರಿಗೆ 1 ನೇ ಎದುರುದಾರರ ಮಾಲೀಕತ್ವದ ಟ್ರಾಕ್ಸ ತೂಫಾನ ವಾಹನ ನೊಂದಣಿ ಸಂಖ್ಯೆಃ ಕೆಎ – 16/ ಬಿ-7583 ನೇದ್ದರಲ್ಲಿ ಸವಣೂರ - ಲಕ್ಷ್ಮೇಶ್ವರ ರಸ್ತೆಯ ಮೇಲೆ ವಾಹನದಲ್ಲಿ ಪ್ರಯಾಣಿಸುತ್ತಿರುವಾಗ, ಸದರಿ ವಾಹನದ ಚಾಲಕನು ಅತೀ ವೇಗವಾಗಿ ನಿಷ್ಕಾಳಜಿತನದಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಅಂಕು

ಡೊಂಕಾಗಿ ಚಲಾಯಿಸಿಕೊಂಡು ಬಂದು ಅಪಘಾತ ಮಾಡಿದ್ದು ಸದರಿ ಅಪಘಾತದಲ್ಲಿ ಅರ್ಜಿದಾರರಿಗೆ Fracture of left Talus bone, Head injury ಹಾಗೂ ದೇಹದ ಇತರೇ ಭಾಗಗಳಿಗೂ ಗಾಯಗಳಾಗಿದ್ದು, ತಕ್ಷಣ ಅವರನ್ನು ಲಕ್ಷ್ಮೇಶ್ವರದ ಅಗಡಿ ಸನ್‌ರೈಸ್ ಆಸ್ಪತ್ರೆಗೆ ದಾಖಲಿಸಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಯ ತತ್ವದರ್ಶ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ನಂತರ ಹುಬ್ಬಳ್ಳಿಯ ಲೈಫಲೈನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಅಲ್ಲಿ ಅವರು ಸುಮಾರು 60 ದಿನಗಳವರೆಗೆ ಒಳರೋಗಿಯಾಗಿ ದಾಖಲುಪಡಿಸಿದ್ದು ಅದಕ್ಕಾಗಿ ಸುಮಾರು ರೂ. 3,00,000-00 ಗಳ ಖರ್ಚು ಮಾಡಿದ್ದು, ಅಪಘಾತದ ಪೂರ್ವದಲ್ಲಿ ಅರ್ಜಿದಾರರು ಇಂಜನಿಯರಿಂಗ್ ವಿದ್ಯಾರ್ಥಿ ಇದ್ದು, ಒಳ ಮತ್ತು ಹೊರ ಆಟಗಳಲ್ಲಿ ಭಾಗವಹಿಸುತ್ತಿದ್ದು, ಈಗ ಹಿಂದಿನಂತೆ ವಿದ್ಯಾಭ್ಯಾಸದಲ್ಲಿ ಆಸಕ್ತಿಯನ್ನು ಕಳೆದುಕೊಂಡಿದ್ದು, ಅವರ ತಲೆಗೆ ಹೊಡೆತ ಬಿದ್ದಿದ್ದರಿಂದ ಸರಿಯಾಗಿ ಓದಲು ಬರೆಯಲು ಕಷ್ಟಕರವಾಗಿದ್ದು ಮತ್ತು ಈ ಅಪಘಾತದಿಂದ ಶಾಶ್ವತ ಅಂಗನ್ಯೂನ್ಯತೆಯನ್ನು ಹೊಂದಿದ್ದು, ಈ ಅಪಘಾತ ಎದುರುದಾರ 1 ನೇದ್ದವರ ವಾಹನ ಚಾಲಕನ ನಿಷ್ಕಾಳಜಿತನದಿಂದ ಉಂಟಾಗಿದ್ದು 2 ನೇ ಎದುರುದಾರರು ಸದರಿ ವಾಹನದ ವಿಮಾ ಕಂಪನಿಯವರಾಗಿದ್ದು ಅವರನ್ನು ಹೊಣೆಗಾರರನ್ನಾಗಿ ಮಾಡಿ ಅರ್ಜಿದಾರರಿಗೆ ಉಂಟಾಗಿರುವ ಗಾಯಗಳಿಗೆ ರೂ. 11,90,000-00 ಮತ್ತು 18 % ರಂತೆ ಬಡ್ಡಿಯನ್ನು ಪರಿಹಾರವಾಗಿ ಕೊಡಿಸಬೇಕೆಂದು ಕೋರಿದ್ದಾರೆ.

3. ಈ ಅರ್ಜಿಯನ್ನು ಸಲ್ಲಿಸಿದ ನಂತರ ನ್ಯಾಯಾಧೀಕರಣವು ನೋಟಿಸ್ ನೀಡಿದ ನಂತರ 1 ಮತ್ತು 2 ನೇ ಎದುರುದಾರರು ಹಾಜರಾಗದೇ ಇರುವುದರಿಂದ ಅವರನ್ನು ಏಕತರ್ಫಿಯೆಂದು ಆದೇಶಿಸಲಾಯಿತು.

4. ಅರ್ಜಿದಾರರು ಅರ್ಜಿಯಲ್ಲಿ ಹೇಳಿರುವ ಸಂಗತಿಗಳನ್ನು ರುಜುವಾತುಪಡಿಸುವುದಕ್ಕಾಗಿ ತಮ್ಮನ್ನು ಪಿಡಬ್ಲ್ಯೂ – 1 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು ತಮ್ಮ ಪರವಾಗಿ 16 ದಾಖಲಾತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-1 ರಿಂದ 15 **ಮತ್ತು** 18 **ಅಂತಾ** ನಿಶಾನೆಗಳಾಗಿ ಗುರ್ತಿಸಿಕೊಂಡಿದ್ದು ಅರ್ಜಿದಾರರಿಗೆ ಅಂಗನ್ಯೂನ್ಯತೆ ಪ್ರಮಾಣಪತ್ರ ನೀಡಿರುವ ವೈದ್ಯಾದಿಕಾರಿಗಳನ್ನು ನ್ಯಾಯಾಲಯದ ನಿಯೋಗಿ ಮೂಲಕ ಪಿಡಬ್ಲ್ಯೂ – 2 ಎಂದು ವಿಚಾರಣೆಗೊಳಪಡಿಸಿಕೊಂಡು **ನಿಪಿ**-16 **ಮತ್ತು** 17 **ದಾಖಲಾತಿಗಳನ್ನು ಗುರುತಿಸಿಕೊಂಡು ತಮ್ಮ** ಸಾಕ್ಷ್ಯವನ್ನು ಪೂರ್ಣಗೊಳಿಸಿರುತ್ತಾರೆ.

5. ಮೇಲ್ಕಂಡ ಅರ್ಜಿಯನ್ನು ದಾಖಲಾತಿಗಳನ್ನು ಪರಿಗಣಿಸಿ ಈ ಕೆಳಕಂಡ ಅಂಶಗಳನ್ನು ರಚಿಸಿರುತ್ತೇನೆ.

**-ಃ ಅಂಶಗಳು ಃ-**

1) ದಿನಾಂಕಃ 27-05-2017 ರಂದು ಮುಂಜಾನೆ 10-00 ಗಂಟೆಯ ಸುಮಾರಿಗೆ 1 ನೇ ಎದುರುದಾರ ಮಾಲೀಕತ್ವದ ಟ್ರ್ಯಾಕ್ಸ್ ತೂಫಾನ ವಾಹನ ನೊಂದಣೆ ಸಂಖ್ಯೆಃ ಕೆಎ – 16/ಬಿ - 7583 ನೇದ್ದರಲ್ಲಿ ಸವಣೂರ - ಲಕ್ಷ್ಮೇಶ್ವರ ರಸ್ತೆಯ ಮೇಲೆ ಪ್ರಯಾಣಿಸುತ್ತಿರುವಾಗ, ಸದರ ವಾಹನದ ಚಾಲಕನು ಅತೀ ವೇಗವಾಗಿ ನಿರ್ಲಕ್ಷತನದಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಬಂದು ಅಪಘಾತ ಪಡಿಸಿದ್ದು ಸದರಿ ಅಪಘಾತದಿಂದ ಅರ್ಜಿದಾರರು ಗಾಯಗೊಂಡಿರುವರು ಎಂಬುವುದನ್ನು ರುಜುವಾತುಪಡಿಸುವರೇ?

2) ಅರ್ಜಿದಾರರು ನಷ್ಟ ಪರಿಹಾರವನ್ನು ಪಡೆಯಲಿಕ್ಕೆ ಬಾಧ್ಯರೇ? ಹಾಗಿದ್ದರೆ, ನಷ್ಟ ಪರಿಹಾರ ಎಷ್ಟು ಕೊಡಬೇಕು ಮತ್ತು ಯಾರು ಕೊಡಬೇಕು?

3) ಯಾವ ಪರಿಹಾರ ಮತ್ತು ಯಾರು ಕೊಡಬೇಕು?

6. ಅರ್ಜಿದಾರರ ಪರ ವಕೀಲರಿಂದ ವಾದವನ್ನು ಕೇಳಲಾಯಿತು.

7. ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರ.

ಅಂಶ ನಂ.1 - ಸಕಾರಾತ್ಮಕವಾಗಿ

ಅಂಶ ನಂ.2 – ಭಾಗಶಃ ಸಕಾರಾತ್ಮಕವಾಗಿ

ಅಂಶ ನಂ.3 – ಅಂತಿಮ ಆದೇಶದಂತೆ ಈ ಕೆಳಗಿನಂತೆ

## ಕಾ ರ ಣ ಗ ಳು

8. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶ ಏನೆಂದರೆ, ಅರ್ಜಿದಾರನು ದಿನಾಂಕಃ 27-05-2017 ರಂದು ಮುಂಜಾನೆ 10-00 ಘಂಟೆಗೆ 1 ನೇ ಎದುರುದಾರರ ಮಾಲೀಕತ್ವದ ಟ್ರ್ಯಾಕ್ಸ್ ತೂಫಾನ ವಾಹನ ನೊಂದಣಿ ಸಂಖ್ಯೆಃ ಕೆಎ – 16 / ಬಿ - 7583 ರ ವಾಹನದ ಚಾಲಕನು ಅತೀ ಜೋರಿನಿಂದ ಹಾಗೂ ನಿಷ್ಕಾಳಜಿತನದಿಂದ ಅಂಕು ಡೊಂಕಾಗಿ ನಡೆಸಿಕೊಂಡು ಬಂದು ವಾಹನದ ಮೇಲಿನ ನಿಯಂತ್ರಣ ಕಳೆದುಕೊಂಡು ಅಪಘಾತ ಮಾಡಿದ್ದು ಅಪಘಾತಪಡಿಸಿದ್ದ ಕಾರಣದಿಂದಾಗಿ ಪರಿಹಾರ ಕೋರಿ ಈ ಅರ್ಜಿಯನ್ನು ದಾಖಲು ಮಾಡಿರುವರು.

9. **ಅಂಶ ನಂ.1ಃ** ಸದರಿ ಅರ್ಜಿಯಲ್ಲಿ ಹೇಳಿರುವ ಸಂಗತಿಗಳನ್ನು ರುಜುವಾತುಪಡಿಸಲು ಅರ್ಜಿದಾರನು ತನ್ನನ್ನು ಪಿಡಬ್ಲ್ಯೂ-1 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ತನ್ನ ಮುಖ್ಯ ವಿಚಾರಣೆಯಲ್ಲಿ ಅರ್ಜಿಯಲ್ಲಿ ಹೇಳಿರುವ ಸಂಗತಿಗಳನ್ನೇ ಯಥಾವತ್ತಾಗಿ ಪುನರುಚ್ಚರಿಸುತ್ತಾ, ದಿನಾಂಕಃ 27-05-2017 ರಂದು ಮುಂಜಾನೆ 10-00 ಗಂಟೆಯ ಸುಮಾರಿಗೆ 1 ನೇ ಎದುರುದಾರರ ಮಾಲೀಕತ್ವದ ಟ್ರ್ಯಾಕ್ಸ ತೂಫಾನ ವಾಹನ ನೊಂದಣಿ ಸಂಖ್ಯೆಃ ಕೆಎ – 16/ ಬಿ-

7583 ನೇದ್ದರಲ್ಲಿ ಸವಣೂರು - ಲಕ್ಷ್ಮೇಶ್ವರ ರಸ್ತೆಯ ಮೇಲೆ ಪ್ರಯಾಣಿಸುತ್ತಿರುವಾಗ, ಸದರಿ ವಾಹನದ ಚಾಲಕನು ಅತೀ ವೇಗವಾಗಿ ನಿಷ್ಕಾಳಜಿತನದಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಅಂಕು ಡೊಂಕಾಗಿ ಚಲಾಯಿಸಿಕೊಂಡು ಬಂದು ಡಿಕ್ಕಿ ಮಾಡಿ ಅಪಘಾತ ಮಾಡಿದ್ದು ಸದರಿ ಅಪಘಾತದಲ್ಲಿ ಅರ್ಜಿದಾರರಿಗೆ Fracture of left Talus bone, Head injury ಹಾಗೂ ದೇಹದ ಇತರೇ ಭಾಗಗಳಿಗೂ ತೀವ್ರ ಸ್ವರೂಪದ ಗಾಯಗಳಾಗಿರುವುದಾಗಿ ಎಂದು ಸಾಕ್ಷಿ ನುಡಿದಿರುವರು.

10. ಸದರಿ ಸಾಕ್ಷಿಗೆ ಪೂರಕವಾಗಿ ನಿಪಿ -1 ರಿಂದ 15 ಹಾಗೂ ನಿಪಿ-18 ರ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ನಿಪಿ-1 ಪ್ರಥಮ ವರ್ತಮಾನ ವರದಿ ಆಗಿದ್ದು, ನಿಪಿ-2 ದೂರು, ನಿಪಿ-3 ಹೇಳಿಕೆ, ನಿಪಿ-4 ಘಟನಾ ಜಾಗೆಯ ಸ್ಥಳ ಪಂಚನಾಮೆ, ನಿಪಿ-5 ಮೋಟಾರು ವಾಹನ ತಪಾಸಣಾ ವರದಿ, ನಿಪಿ-6 ಎಮ್ ಎಲ್ ಸಿ ದಾಖಲಾತಿ, ನಿಪಿ-7 ಮತ್ತು 8 ಗಾಯದ ಪ್ರಮಾಣಪತ್ರ ಗಳು, ನಿಪಿ-9 ಅಂತಿಮ ದೋಷಾರೋಪಣೆ ಪಟ್ಟಿ, ನಿಪಿ-10 ಆಧಾರ ಗುರುತಿನ ಚೀಟಿಯ ಜರಾಕ್ಸ್ ಪ್ರತಿ, ನಿಪಿ-11 ವೈದ್ಯಕೀಯ ಬಿಲ್ಲು, ನಿಪಿ-12 ರೇಡಿಯೋಲಾಜಿ ವರದಿ, ನಿಪಿ-13 ಅಡ್ವಾನ್ಸ್ ರಶೀದಿ, ನಿಪಿ-14 ಒಟ್ಟು 45 ವೈದ್ಯಕೀಯ ರಶೀದಿಗಳು, ನಿಪಿ-15 ಒಟ್ಟು 32 ವೈದ್ಯಕೀಯ ಸಲಹಾ ಚೀಟಿಗಳು ಹಾಗೂ ನಿಪಿ -18 ವಿಮಾ ಪಾಲಸಿಯಾಗಿರುವುದು.

11. ನಿಪಿ - 1 ರ ಪ್ರಕಾರ ಈ ಅಪಘಾತ 1 ನೇ ಎದುರುದಾರನ ಮಾಲೀಕತ್ವದ ವಾಹನದ ಚಾಲಕನ ತಪ್ಪಿನಿಂದ ಆಗಿರುವುದಾಗಿ ಎಂದು ಆತನ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಿಸಿಕೊಂಡಿರುವುದು ನ್ಯಾಯಾಲಯದ ಗಮನಕ್ಕೆ ಕಂಡು ಬರುವುದು. ನಿಪಿ - 9 ಅಂತಿಮ

ದೋಷಾರೋಪಣೆ ಪಟ್ಟಿಯಾಗಿದ್ದು, ಸದರಿ ದಾಖಲೆಯನ್ನು ಪರಿಶೀಲಿಸಿದಾಗ 1 ನೇ ಎದುರುದಾರನ ಮಾಲೀಕತ್ವದ ವಾಹನದ ಚಾಲಕನಾದ ಮುಕ್ತಾರಅಹ್ಮದ ತಂದೆ ಇಮಾಮಸಾಬ ಮುಂಡಗೋಡ ಇತನ ವಿರುದ್ಧ ಸವಣೂರು ಪೊಲೀಸ ಠಾಣೆಯ ಆರಕ್ಷಕ ಉಪನಿರೀಕ್ಷಕರು ಭಾರತೀಯ ದಂಡ ಸಂಹಿತೆ ಕಲಂ 279 ಮತ್ತು 338 ರ ಹಾಗೂ ಮೋಟಾರು ವಾಹನಗಳ ಅಧಿನಿಯಮ 134 ಸಹಕಲಂ 187 ಹಾಗೂ 3 ಸಹಕಲಂ 181 ರ ಅಡಿಯಲ್ಲಿ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುವುದು ಕಂಡು ಬರುವುದು. ಆದ್ದರಿಂದ ನಿಪಿ - 9 ರ ಪ್ರಕಾರ ಈ ಅಪಘಾತವು 1 ನೇ ಎದುರುದಾರರ ವಾಹನದ ಚಾಲಕನ ತಪ್ಪಿನಿಂದ ಆಗಿರುವುದಾಗಿ ಎಂದು ಸ್ಪಷ್ಟವಾಗುವುದು.

12. ಈ ಪ್ರಕರಣ ದಾಖಲಾದ ನಂತರ ಎದುರುದಾರರಿಗೆ ನೋಟಿಸು ಜಾರಿಯಾದರೂ ಸಹ 1 ಮತ್ತು 2 ನೇ ಎದುರುದಾರರು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಮತ್ತು ಅರ್ಜಿದಾರರು ಅರ್ಜಿಯಲ್ಲಿ ಹೇಳಿರುವಂತಹ ಸಂಗತಿಗಳನ್ನು ಅಲ್ಲಗಳೆದಿರುವುದಿಲ್ಲ. ಆದ್ದರಿಂದ ಪಿಡಬ್ಲೂ -1 ರವರ ಸಾಕ್ಷ್ಯವು ನಿರಾಕರಿಸಲು ಬಲಯುತವಾದ ಯಾವುದೇ ಕಾರಣಗಳಿರುವುದಿಲ್ಲ. ಆದ್ದರಿಂದ ಅವರು ಹಾಜರುಪಡಿಸಿರುವ ಸಾಕ್ಷಾಧಾರಗಳಿಂದ ಸ್ಪಷ್ಟವಾಗುವುದೇನೆಂದರೆ, ಈ ಅಪಘಾತವು ಅರ್ಜಿದಾರರು ಅರ್ಜಿಯಲ್ಲಿ ಹೇಳಿರುವಂತೆ ಹಾಗೂ ಪಿಡಬ್ಲೂ - 1 ವಿನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ 1 ನೇ ಎದುರುದಾರನ ವಾಹನದ ಚಾಲಕನ ನಿರ್ಲಕ್ಷದಿಂದ ಈ ಅಪಘಾತ ಆಗಿರುವುದನ್ನು ರುಜುವಾತುಪಡಿಸಿರುವುದರಿಂದ ಅಂಶ ನಂ. 1 ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

13. **ಅಂಶ ನಂ. 2 :** ಪಿಡಬ್ಲ್ಯೂ – 1 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನುಡಿಯುವುದೇನೆಂದರೆ ಈ ಅಪಘಾತ ಪೂರ್ವದಲ್ಲಿ ತಾನು ಇಂಜನಿಯರಿಂಗ್ ವಿದ್ಯಾರ್ಥಿ ಇದ್ದು, ಒಳ ಮತ್ತು ಹೊರ ಆಟಗಳಲ್ಲಿ ಭಾಗವಹಿಸುತ್ತಿದ್ದು, ತನ್ನ ತಲೆಗೆ ಹೊಡೆತ ಬಿದ್ದಿದ್ದರಿಂದ ಸರಿಯಾಗಿ ಓದಲು ಬರೆಯಲು ಕಷ್ಟಕರವಾಗಿದ್ದು, ವಿದ್ಯಾಭ್ಯಾಸದಲ್ಲಿ ಆಸಕ್ತಿಯನ್ನು ಕಳೆದುಕೊಂಡಿದ್ದು, ಈ ಅಪಘಾತದಿಂದ ತನಗೆ Fracture of left Talus bone and head injury ಹಾಗೂ ದೇಹದ ಇತರೇ ಭಾಗಗಳಿಗೂ ತೀವ್ರ ಸ್ವರೂಪದ ಗಾಯಗಳಾಗಿದ್ದು ತನ್ನ ಕುಟುಂಬದ ಜೀವನ ಗಾಯಗಳಾಗಿದ್ದು ತನ್ನ ಕುಟುಂಬದ ಜೀವನ ನಿರ್ವಹಣೆ ಮಾಡುವುದು ತುಂಬಾ ಕಷ್ಟಕರವಾಗಿದ್ದು ತಾನು ನಿರ್ಗತಿಕನಾಗಿದ್ದು ಆದ್ದರಿಂದ ಅರ್ಜಿಯಲ್ಲಿ ಕೋರಿರುವಂತೆ ಪರಿಹಾರ ಒದಗಿಸಿಕೊಂಡಬೇಕೆಂದು ವಿನಚಿತಿಸಿಕೊಂಡಿರುವರು.

14. ಮುಂದುವರೆದು ಪಿಡಬ್ಲ್ಯೂ – 1 ರವರು ಸಾಕ್ಷ್ಯ ನುಡಿಯುವುದೆನೆಂದರೆ, ಅಪಘಾತವಾದ ತಕ್ಷಣ ಚಿಕಿತ್ಸೆಗಾಗಿ ಲಕ್ಷ್ಮೇಶ್ವರದ ಅಗಡಿ ಸನ್‌ರೈಸ್ ಆಸ್ಪತ್ರೆ ಪ್ರೈವೇಟ್ ಲಿಮಿಟೆಡ್‌ದಲ್ಲಿ ಚಿಕಿತ್ಸೆ ಪಡೆದುಕೊಂಡು ನಂತರ ಹುಬ್ಬಳ್ಳಿಯ ತತ್ವದರ್ಶ ಚಿಕಿತ್ಸೆ ಪಡೆದುಕೊಂಡು ನಂತರ ಹುಬ್ಬಳ್ಳಿಯ ಲೈಫಲೈನ ಆಸ್ಪತ್ರೆಯಲ್ಲಿ ಸುಮಾರು 60 ದಿನಗಳವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿದ್ದು ಈ ಅಪಘಾತದಿಂದಾದ ಗಾಯಗಳಿಗೆ ಸಂಬಂಧಪಟ್ಟಂತೆ ಚಿಕಿತ್ಸೆ ಮಾಡಿದ್ದು ಅದಕ್ಕೆ ಸುಮಾರು ರೂ.3,00,000-00 ವೈದ್ಯಕೀಯ ಖರ್ಚು ಮಾಡಿರುವುದಾಗಿ ಎಂದು ಸಾಕ್ಷಿ ನುಡಿದು ಸದರಿ ಗಾಯಗಳಿಗೆ ಗಾಯದ ಪ್ರಮಾಣ ಪತ್ರವನ್ನು ನೀಡಿರುವ ಬಗ್ಗೆ ನಿಶಾನೆ ಪಿ- 7 ಮತ್ತು 8 ರ

ದಾಖಲಾತಿ ಗಳನ್ನು ಗುರುತಿಸಿಕೊಂಡಿದ್ದು ಸದರಿ ದಾಖಲೆಯನ್ನು ಪರಿಶೀಲಿಸಿದಾಗ ಅರ್ಜಿದಾರರಿಗೆ . ಈ ಕೆಳಕಂಡ ಗಾಯಗಳಾಗಿರುವುದು ಕಂಡುಬರುವುದು

1. Head injury and left ankle injury
2. Head injury – Sutured CLW +
3. Left Ankle and Foot – Swelling and tenderness +

ಈ ಮೇಲೆ ಹೇಳಲಾದ ಗಾಯಗಳು ತೀವ್ರ ಸ್ವರೂಪದ ಗಾಯಗಳಾಗಿದ್ದುರುವುದೆಂದು ಗಾಯದ ಪ್ರಮಾಣ ಪತ್ರ ಗಳಿಂದ ಕಂಡು ಬರುವುದು.

15. ಈ ಗಾಯಗಳಿಗೆ ಸಂಬಂಧಪಟ್ಟಂತೆ ಅಂಗನ್ಯೂನ್ಯತೆಯ ಪ್ರಮಾಣ ಪತ್ರ ನೀಡಿರುವ ವೈದ್ಯಾಧಿಕಾರಿಗಳನ್ನು ಪಿಡಬ್ಲ್ಯೂ – 2 ಎಂದು ನ್ಯಾಯಾಲಯದ ನಿಯೋಗಿ ಮೂಲಕ ವಿಚಾರಣೆಗೊಳಪಡಿಸಿಕೊಂಡಿದ್ದು ಅವರು ತಮ್ಮ ಸಾಕ್ಷಿಯ ಮುಖ್ಯ ವಿಚಾರಣೆಯಲ್ಲಿ ಆಸ್ಪತ್ರೆಯ ಬಿಡುಗಡೆಯ ಪತ್ರದ ಪ್ರಕಾರ ದಿನಾಂಕ 27-05-2017 ರಂದು ಈ ರಸ್ತೆ ಅಪಘಾತವಾಗಿದ್ದು ಪಿಡಬ್ಲ್ಯೂ -1 ರವರಿಗೆ X-ray of left ankle joint shows E/o Talus fracture ಗಾಯಗಳು ಕಂಡುಬಂದಿರುವುದಾಗಿ ಎಂದು ಕ್ಷಕಿರಣಗಳ ವರದಿ ನಿಪಿ -17 ರಲ್ಲಿ ಕಂಡುಬರುವುದಾಗಿ ಎಂದು ಸಾಕ್ಷಿ ನುಡಿದಿರುವರು. ಅದೇ ರೀತಿ ನಿಶಾನೆ ಪಿ-16 ಅಂಗನ್ಯೂನ್ಯತೆ ಪ್ರಮಾಣ ಪತ್ರ ದಾಖಲೆಯನ್ನು ನೀಡುವ ಪೂರ್ವದಲ್ಲಿ ಅರ್ಜಿದಾರರನ್ನು ದಿನಾಂಕ 11-07-2019 ರಂದು ತಪಾಸಣೆಗೆ ಒಳಪಡಿಸಿದ ನಂತರ ಕಂಡು ಬಂದಂತ ವೈದ್ಯಕೀಯ ವರದಿಯನ್ನು ಈ ರೀತಿಯಾಗಿ ಹೇಳಿರುವರು

ON CLINICAL EXAMINATION

1. There is moderate tenderness over left ankle joint
2. There is grade four wasting of muscle around ankle joint.
3. There is restriction of movement over left ankle joint about 50%.

16. ಅರ್ಜಿದಾರನು ದಿನಾಂಕ 11-07-2019 ರಂದು ಅಂಗನ್ಯೂನ್ಯತೆಯ ಪರೀಕ್ಷೆಗೆ ಬಂದಾಗ ಅವರ ಆಸ್ಪತ್ರೆಯಲ್ಲಿ ಅರ್ಜಿದಾರನಿಗೆ ಪರೀಕ್ಷೆ ಮಾಡಿ ನೋಡಲಾಗಿ ಅರ್ಜಿದಾರನ ಅಂಗನ್ಯೂನ್ಯತೆಯು ಶೇಕಡಾ 21 ರಷ್ಟು ಇರುವುದಾಗಿ ಎಂದು ಸಾಕ್ಷಿ ನುಡಿದಿರುವರು. ಸದರಿ ಪಿಡಬ್ಲ್ಯೂ -2 ರವರು ಗಾಯಾಳುವಿಗೆ ಚಿಕಿತ್ಸೆ ನೀಡಿರುವ ಬಗ್ಗೆ ಹಾಗೂ ಗಾಯದ ಪ್ರಮಾಣ ಪತ್ರ ನೀಡಿರುವ ಬಗ್ಗೆ ಯಾವುದೇ ವಿವಾದ ಇರುವುದಿಲ್ಲ. ಆದ್ದರಿಂದ ನಿಪಿ 16 ರ ಅಂಗನ್ಯೂನ್ಯತೆಯ ಪ್ರಕಾರ ಶೇಕಡಾ 21 ರಷ್ಟು ಶಾಶ್ವತ ಅಂಗನ್ಯೂನ್ಯತೆ ಆಗಿರುವುದು ಸ್ಪಷ್ಟವಾಗುವುದು. ಎದುರುದಾರರ 1 ಮತ್ತು 2 ನೇ ದವರು ಏಕತರ್ಫಿಯಾಗಿರುವುದರಿಂದ ಯಾವುದೇ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಗಿದೆ.

17. ಸಾಮಾನ್ಯವಾಗಿ ವೈದ್ಯರು ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ನೀಡಿಬೇಕಾದರೆ ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಮಂತ್ರಾಲಯದ ಸರಕಾರದ ಅಧಿಸೂಚನೆಯನ್ನು ಜೂನ್ 2001 ರಲ್ಲಿ ಹೊರಡಿಸಿದ್ದು ಇವರ ನಿರ್ದೇಶನದ ಮೇರೆಗೆ ಅಂಗನ್ಯೂನ್ಯತೆ

ಪ್ರಮಾಣ ಪತ್ರ ನೀಡಬೇಕಾಗುವದು ವೈದ್ಯರು ಅಂಗನ್ಯೂನ್ಯತೆ ಪ್ರಮಾಣ ನೀಡುವ ಪೂರ್ವದಲ್ಲಿ ಅಂಗನ್ಯೂನ್ಯತೆ ನಿರ್ಧರಿಸಬೇಕಾದರೆ, a+b (90-a)/90 ಈ ಸೂತ್ರವನ್ನು ಅಳವಡಿಸಿ ನೀಡಿದಾಗ ಮಾತ್ರ ಅದು ಕಾನೂನುಬದ್ಧವಾಗಿರತಕ್ಕಂತಹ ಅಂಗನ್ಯೂನ್ಯತೆ ಪ್ರಮಾಣ ಪತ್ರವಾಗಿರುವದು ಆದರೆ ಪಿಡಬ್ಲ್ಯೂ -2 ರವರು ಈ ಸೂತ್ರವನ್ನು ಅಳವಡಿಸಿದ ಬಗ್ಗೆ ಅರ್ಜಿದಾರನಿಗೆ ಸಂಬಂಧಪಟ್ಟಂತೆ ನಿಪಿ -16 ರಂತೆ ಅಂಗನ್ಯೂನ್ಯತೆ ಪ್ರಮಾಣ ಪತ್ರದಲ್ಲಿ ನಮೂದಿಸಿರುವುದಿಲ್ಲ ಆದ್ದರಿಂದ ಈ ಅಂಗನ್ಯೂನ್ಯತೆ ಪ್ರಮಾಣ ಪತ್ರವು ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಮಂತ್ರಾಲಯದ ಸರಕಾರದ ಅಧಿಸೂಚನೆಯನ್ನು ಜೂನ್ 2001 ರ ಪ್ರಕಾರದ ನಮೂನೆಯಲಿರುವುದಿಲ್ಲ. ಪಿಡಬ್ಲ್ಯೂ - 2 ರವರು ಗಾಯಾಳು ಅರ್ಜಿದಾರನಿಗೆ ಅಪಘಾತವಾದ ತಕ್ಷಣ ಚಿಕಿತ್ಸೆ ನೀಡಿರುವುದಿಲ್ಲ. ಆದರೆ ಕೇವಲ ಅಂಗನ್ಯೂನ್ಯತೆ ಪ್ರಮಾಣ ಪತ್ರ ಪಡೆದುಕೊಳ್ಳುವ ಸಲುವಾಗಿ ಅಪಘಾತವಾದ 2 ವರ್ಷಗಳ ನಂತರ ವೈದ್ಯಕೀಯ ತಪಾಸಣೆ ಮಾಡಿರುವರು. ಆದ್ದರಿಂದ ನಿಪಿ -7 ಮತ್ತು 8 ರ ಪ್ರಕಾರ ಈ ಅಪಘಾತದಿಂದ ಪಿಡಬ್ಲ್ಯೂ -1 ರವರಿಗೆ ತೀರ್ವ ಸ್ವರೂಪದ ಗಾಯಗಳಾಗಿರುವವು ಎಂದು ನಮೂದು ಮಾಡಿರುವುದು ಈ ದಾಖಲೆಯಿಂದ ಕಂಡು ಬರುವದು. ಈ ಅಪಘಾತದಲ್ಲಿ ಪಿಡಬ್ಲ್ಯೂ -1 ರವರು ಗಾಯಗೊಂಡು ಚಿಕಿತ್ಸೆ ಪಡೆದುಕೊಂಡಿರುವುದು ನಿಪಿ-11 ರಿಂದ 15 ರ ದಾಖಲೆಗಳಿಂದ ಸ್ಪಷ್ಟವಾಗುವದು. ಆದ್ದರಿಂದ ಈ ಅಪಘಾತದಿಂದ ಅರ್ಜಿದಾರರು ಅಂಗನ್ಯೂನ್ಯತೆ ಆಗಿರುವುದನ್ನು ರುಜುವಾತುಪಡಿಸುವಲ್ಲಿ ಸೂಕ್ತವಾದ ಸಾಕ್ಷ್ಯಾಧಾರಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಅರ್ಜಿದಾರರು ಈ ಕೆಳಕಂಡ ಶೀರ್ಷಿಕೆ ಅಡಿಯಲ್ಲಿ ಮಾತ್ರ ಪರಿಹಾರವನ್ನು ಪಡೆಯಲು ಅರ್ಹರಿರುತ್ತಾರೆಂಬುದು ನ್ಯಾಯಾಲಯದ ಗಮನಕ್ಕೆ ಕಂಡು ಬರುವದು.

1. **ವೈದ್ಯಕೀಯ ವೆಚ್ಚಕ್ಕಾಗಿಃ**

ಸದರಿ ಪಿಡಬ್ಲ್ಯೂ-1 ರವರು ತಮ್ಮ ಸಾಕ್ಷ್ಯದಲ್ಲಿ ಹಾಗೂ ಹಾಜರುಪಡಿಸಿರುವ ನಿಪಿ - 11 ರಿಂದ 15 ರ ದಾಖಲೆಗಳ ಪ್ರಕಾರ ಆಸ್ಪತ್ರೆಯ **ಸಲಹಾ ಚೀಟಿಗಳು ಹಾಗೂ ವೈದ್ಯಕೀಯ ಬಿಲ್ಲುಗಳನ್ನು** ಪರಿಶೀಲಿಸಿದಾಗ ಅವುಗಳ ಒಟ್ಟು ಮೊತ್ತ **ರೂ.60,516-00** ಗಳ ಹಣವನ್ನು ವೆಚ್ಚ ಮಾಡಿರುತ್ತಾರೆಂಬುದು ಕಂಡು ಬರುತ್ತದೆ. ಆದ್ದರಿಂದ ಒಟ್ಟಾರೆಯಾಗಿ ಅರ್ಜಿದಾರರು **ರೂ. 60,516-00** ಗಳನ್ನು ವೈದ್ಯಕೀಯ ವೆಚ್ಚಕ್ಕಾಗಿ ಪರಿಹಾರವನ್ನು ಪಡೆಯಲು ಅರ್ಹರಿರುತ್ತಾರೆಂಬುದು ನ್ಯಾಯಾಲಯಕ್ಕೆ ಕಂಡುಬರುತ್ತದೆ.

2. **ಅಪಘಾತದಲ್ಲಿ ಆದ ಗಾಯಗಳಿಂದಾಗಿ ನೋವು ಮತ್ತು ದುಃಖಕ್ಕಾಗಿಃ**

ಸದರಿ ಅಪಘಾತದಿಂದ ಅರ್ಜಿದಾರರು ನೋವು ಹಾಗೂ ಸಂಕಷ್ಟವನ್ನು ಅನುಭವಿಸಿರುತ್ತಾರೆಂಬುದನ್ನು ನ್ಯಾಯಾಲಯದ ಗಮನಕ್ಕೆ ಕಂಡುಬರುತ್ತದೆ ಸದರಿ ಶಿರ್ಷಿಕೆ ಅಡಿ **ರೂ.25,000-00** ಗಳ ಪರಿಹಾರವನ್ನು ಪಡೆಯಲು ಅರ್ಹರಿರುತ್ತಾರೆಂಬುದು ನ್ಯಾಯಾಲಯದ ಗಮನಕ್ಕೆ ಕಂಡುಬರುತ್ತದೆ.

3. **ಪೌಷ್ಟಿಕ ಆಹಾರಕ್ಕಾಗಿ :**

ಸದರಿ ಅಪಘಾತದಿಂದ ಗಾಯದ ಪ್ರಮಾಣ ಪತ್ರ **ದಲ್ಲಿ** ಕಂಡುಬರುವಂತೆ ತೀರ್ವ ಸ್ವರೂಪದ ಗಾಯಗಳನ್ನು ಅರ್ಜಿದಾರರು ಹೊಂದಿರುತ್ತಾರೆಂಬುದು ಹಾಗೂ ಶಸ್ತ್ರ ಚಿಕಿತ್ಸೆಗೆ

ಒಳಪಟ್ಟಿರುತ್ತಾರೆಂಬುದು ನ್ಯಾಯಾಲಯದ ಮುಂದಿರುವ ದಾಖಲೆಗಳ ಮೂಲಕ ಕಂಡುಬರುತ್ತದೆ. ಕಾರಣ ಚಿಕಿತ್ಸೆಯ ಸಮಯದಲ್ಲಿ ಹಾಗೂ ನಂತರದಲ್ಲಿ ಕೆಲವು ದಿನಗಳವರೆಗೆ ಪೌಷ್ಟಿಕ ಆಹಾರ ಸೇವನೆಯ ಅವಶ್ಯಕತೆಯಿರುತ್ತದೆಂಬುದು ಕಂಡುಬರುತ್ತದೆ. ಆದ್ದರಿಂದ ಅದಕ್ಕಾಗಿ **ರೂ.10,000-00 ಗಳ** ಪರಿಹಾರವನ್ನು ಪಡೆಯಲು ಅರ್ಹರಿರುತ್ತಾರೆಂಬುದು ಕಂಡು ಬರುತ್ತದೆ.

**4. ಸಂಚಾರಿ ವೆಚ್ಚಕ್ಕಾಗಿ :**

ಅರ್ಜಿದಾರರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಅಪಘಾತವಾದ ಸ್ಥಳದಿಂದ ಆಸ್ಪತ್ರೆಗೆ ಮತ್ತು ಮನೆಗೆ ಬರಲು ಹಣವನ್ನು ವೆಚ್ಚಪಡಿಸಿರುತ್ತಾರೆಂದು ಹೇಳಿದ್ದು ಚಿಕಿತ್ಸೆಗಾಗಿ ಹಲವಾರು ಬಾರಿ ಆಸ್ಪತ್ರೆಗೆ ಹೋಗಿ ಬಂದು ಮಾಡಿದ್ದು ಆದ್ದರಿಂದ ಸದರಿ ಅರ್ಜಿದಾರರು **ರೂ.10,000-00 ಗಳ** ಪರಿಹಾರವನ್ನು ಪಡೆಯಲು ಅರ್ಹನಿರುತ್ತಾರೆಂಬುದು ಕಂಡುಬರುತ್ತದೆ.

**5. ಆಸ್ಪತ್ರೆಯಲ್ಲಿ ಒಳರೋಗಿಯಾದ ವೆಚ್ಚಕ್ಕಾಗಿ :**

ಸದರಿ ಪಿಡಬ್ಲ್ಯೂ 1 ರವರು ತಮ್ಮ ಮುಂದುವರೆದ ಸಾಕ್ಷದಲ್ಲಿ ತಾವು ಒಳರೋಗಿಯಾಗಿ **ದಿನಾಂಕಃ** 27-05-2017 **ರಿಂದ** 06-06-2017 **ರವರೆಗೆ ಒಟ್ಟು** 10 **ದಿನಗಳ ಚಿಕಿತ್ಸೆ** ಪಡೆದಿದ್ದು ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದು ಅದಕ್ಕಾಗಿ 3,00,000-00 ರೂ ಗಳ ಖರ್ಚು ಮಾಡಿರುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ ಸದರಿ ಶಿರ್ಷಿಕೆ ಅಡಿಯಲ್ಲಿ **ರೂ.10,000-00** ಗಳ ಹಣವನ್ನು ನೀಡುವುದು ಸೂಕ್ತವೆಂದು ಈ ನ್ಯಾಯಾಲಯಕ್ಕೆ ಕಂಡುಬರುವುದು.

18. ಆದ್ದರಿಂದ ಸದರಿ ಅರ್ಜಿದಾರರು ಈ ಕೆಳಕಂಡ ಶಿರ್ಷಿಕೆಯಲ್ಲಿ ಪರಿಹಾರ ಧನವನ್ನು ಪಡೆಯಲು ಅರ್ಹರಿರುತ್ತಾರೆಂಬುದು ಕಂಡುಬರುತ್ತದೆ.

| | | | |
|---|---|---|---|
| **1.** | **ವೈದ್ಯಕೀಯ ವೆಚ್ಚಕ್ಕಾಗಿ** | **- ರೂ.** | **60,516-00** |
| **2.** | **ಅಪಘಾತದಲ್ಲಿ ಆದ ಗಾಯಗಳಿಂದಾಗಿ ನೋವಿಗಾಗಿ ಮತ್ತು ದುಃಖಕ್ಕಾಗಿ** | **- ರೂ.** | **25,000-00** |
| **3.** | **ಪೌಷ್ಟಿಕ ಆಹಾರಕ್ಕಾಗಿ** | **-ರೂ.** | **10,000-00** |
| **4.** | **ಸಂಚಾರಿ ವೆಚ್ಚಕ್ಕಾಗಿ** | **-ರೂ.** | **10,000-00** |
| **5.** | **ಆಸ್ಪತ್ರೆಯಲ್ಲಿ ಒಳರೋಗಿಯಾದ ವೆಚ್ಚಕ್ಕಾಗಿ** | -ರೂ. | **10,000-00** |
| | | | --------------- |
| | **ಒಟ್ಟು** | ರೂ. | **1,15,516-00** |

19. ಸದರಿ ಅಂಶಗಳನ್ನು ಪರಿಗಣಿಸಿದಾಗ ಅರ್ಜಿದಾರರು ವಾಹನ ಅಪಘಾತದಲ್ಲಿ ತನಗೆ ಆದ ತೀರ್ವ ಸ್ವರೂಪದ ಗಾಯಗಳಿಗೆ ಸಂಬಂಧಪಟ್ಟಂತೆ ಒಟ್ಟು **ರೂ.1,15,516-00** ಪರಿಹಾರವನ್ನು ಪಡೆಯಲು ಅರ್ಹರಿರುತ್ತಾರೆಂಬುದು ನ್ಯಾಯಾಲಯದ ಗಮನಕ್ಕೆ ಕಂಡುಬರುತ್ತದೆ.

20. 1ನೇ ಎದುರುದಾರ ವಾಹನದ ಮಾಲೀಕರಾಗಿದ್ದು ಪರಿಹಾರವನ್ನು ಹಕ್ಕೊತ್ತಾಯದಾರರಿಗೆ ಕೊಡಬೇಕಾಗಿದ್ದು ವಾಹನವು 2ನೇ ಎದುರುದಾರರಲ್ಲಿ ವಿಮೆಯಾಗಿದ್ದು **ನಿಪಿ-**

18 ರ ಪ್ರಕಾರ ವಿಮೆಯ ದಿನಾಂಕ 27-02-2017 ರಿಂದ 26-02-2018 ರವರೆಗೆ ಚಾಲ್ತಿಯಲ್ಲಿದ್ದು ಅಪಘಾತವಾದ ದಿನಾಂಕ 27-05-2017 ರಂದು ಆಗಿದ್ದು ವಿಮಾ ಚಾಲ್ತಿಯಲ್ಲಿದ್ದ ಅವಧಿಯೊಳಗೆ ಅಪಘಾತವಾದ ಕಾರಣ 2ನೇ ಎದುರುದಾರರು ಪೂರ್ತಿ ಪರಿಹಾರದ ಹಣವನ್ನು 1ನೇ ಎದುರುದಾರರ ಪರವಾಗಿ ಪಾವತಿಸಕ್ಕದ್ದು ಎಂಬುದಾಗಿ ತೀರ್ಮಾನಕ್ಕೆ ಬಂದು ಆದ್ದರಿಂದ **ಈ** ಅಂಶವನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

21. **<u>ಅಂಶ ನಂ. 3 :</u>** ಈ ಮೇಲೆ ಚರ್ಚಿಸಿದ ಅಂಶಗಳ ಆಧಾರದ ಮೇಲೆ ಕೆಳಗಿನಂತೆ ಆದೇಶಿಸಲಾಗಿದೆ.

## <u>ಆದೇಶ</u>

ಅರ್ಜಿದಾರರು ಮೋಟಾರು ವಾಹನ ಕಾಯ್ದೆ **1988** ಹಾಗೂ ತಿದ್ದುಪಡಿ ಕಾಯ್ದೆ **1994** ರ ಕಲಂ **166** ರಡಿ ಸಲ್ಲಿಸಿದ ಅರ್ಜಿಯನ್ನು ಭಾಗಶಃ ಪುರಸ್ಕರಿಸಲಾಗಿದೆ.

ಅರ್ಜಿದಾರರು ರೂ. **1,15,516-00** ಗಳ ಪರಿಹಾರವಾಗಿ ಶೇಕಡಾ **6%** ಬಡ್ಡಿಯೊಂದಿಗೆ ಪರಿಹಾರದ ಹಣ ಪಡೆಯಲು ಅರ್ಹರಿರುತ್ತಾರೆ.

ಅರ್ಜಿದಾರನಿಗೆ ಸದರಿ ಪರಿಹಾರದ ಹಣವನ್ನು ಶೇಕಡಾ **6%** ರ ಬಡ್ಡಿಯೊಂದಿಗೆ **2** ನೇ ಎದುರುದಾರರು ಈ ಅರ್ಜಿ ಸಲ್ಲಿಸಿದ ದಿನಾಂಕದಿಂದ ಪೂರ್ತಿ ಮೊತ್ತ ಸಂದಾಯ ಆಗುವವರೆಗೆ ಬಡ್ಡಿ ಸಮೇತ ನೀಡಲು ಆದೇಶಿಸಲಾಗಿದೆ.

ಈ ಪ್ರಕರಣದಲ್ಲಿ **2** ನೇ ಎದುರುದಾರರು ಈ ಆದೇಶವಾದ ದಿನಾಂಕದಿಂದ **30** ದಿನಗಳ ಒಳಗಾಗಿ ಪರಿಹಾರದ ಮೊತ್ತವನ್ನು ಬಡ್ಡಿ ಸಮೇತ ಈ ನ್ಯಾಯಾಲಯದಲ್ಲಿ ಠೇವಣಿಸಬೇಕೆಂದು ನಿರ್ದೇಶಿಸಲಾಗಿದೆ ಮಾನ್ಯ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ಎಲ್‌ಸಿಎ **I-120/2013** ರ ದಿನಾಂಕಃ **19-08-2019** ರ ಸುತ್ತೋಲೆಯ ಪ್ರಕಾರ ಸದರಿ ಜಮಾ ಮಾಡಿದ ಹಣವನ್ನು ಅರ್ಜಿದಾರನ ಹೆಸರಿನಲ್ಲಿ ಸಂಪೂರ್ಣವಾಗಿ ಬಿಡುಗಡೆ ಮಾಡಲು ಆದೇಶಿಸಲಾಗಿದೆ.

ಅರ್ಜಿಯಲ್ಲಿನ ವಕೀಲರ ಫೀಜನ್ನು ರೂ. **1,000-00** ರಂತೆ ನಿಗದಿಪಡಿಸಲಾಗಿದೆ.

ಈ ಮೇಲಿನಂತೆ ಐತೀರ್ಪನ್ನು ತಯಾರಿಸುವುದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ ಅವರು ಬೆರಳಚ್ಚು ಮಾಡಿದ ನಂತರ ಓದಿ ತಿದ್ದುಪಡಿ ಮಾಡಿ ಬಹಿರಂಗ ನ್ಯಾಯಾಲಯದಲ್ಲಿ ಇದೇ ದಿನಾಂಕಃ 13 ನೇ ಡಿಸೆಂಬರ್ 2019 ನೇ ದಿನದಂದು ವಿಧ್ಯುಕ್ತವಾಗಿ ಘೋಷಿಸಲಾಯಿತು).

(ವಿಜಯಕುಮಾರ ಕನ್ನೂರ)
ಹಿರಿಯ ಸಿವಿಲ್ ಮತ್ತು ಎಂ ಎ ಸಿ ಟಿ
ನ್ಯಾಯಾಧೀಶರು, ಶಿಗ್ಗಾಂವ.
ಪೀಠಾಸೀನ ಸ್ಥಳಃ ಸವಣೂರು.

# ಅನುಸೂಚಿ

1. **ಅರ್ಜಿದಾರರ ಪರ ಸಾಕ್ಷಿದಾರರ ಪಟ್ಟಿ**

ಪಿಡಬ್ಲ್ಯೂ - 1 : ಶ್ರೀ ವಿನಾಯಕ ಉರ್ಫ ವಿನಯಕುಮಾರ ತಂದೆ ರುದ್ರಪ್ಪ ತೆಂಬದಮನಿ
ಪಿಡಬ್ಲ್ಯೂ - 2 : ಡಾ. ಲಕ್ಷ್ಮಣ ತಂದೆ ಜಲಂದರ ನಾಯಕ

2. **ಎದುರುದಾರರ ಪರ ಸಾಕ್ಷಿದಾರರ ಪಟ್ಟಿ**

- - ಯಾರೂ ಇಲ್ಲಾ - -

3. **ಅರ್ಜಿದಾರರ ಪರ ಹಾಜರುಪಡಿಸಿದ ದಾಖಲಾತಿಗಳ ಪಟ್ಟಿ**

| | | |
|---|---|---|
| ನಿಪಿ-1 | : | ಪ್ರಥಮ ವರ್ತಮಾನ ವರದಿಯ |
| ನಿಪಿ-2 | : | ದೂರು |
| ನಿಪಿ-3 | : | ಹೇಳಿಕೆ |
| ನಿಪಿ-4 | : | ಸ್ಥಳ ಪಂಚನಾಮೆ |
| ನಿಪಿ-5 | : | ಮೋಟಾರು ತಪಾಸಣಾ ವರದಿ |
| ನಿಪಿ-6 | : | ಎಮ್ ಎಲ್ ಸಿ ದಾಖಲಾತಿ |
| ನಿಪಿ-7 ಮತ್ತು 8 | : | ಗಾಯದ ಪ್ರಮಾಣ ಪತ್ರಗಳು |
| ನಿಪಿ-9 | : | ಅಂತಿಮ ದೋಷಾರೋಪಣೆ ಪಟ್ಟಿ |
| ನಿಪಿ-10 | : | ಆಧಾರ ಕಾರ್ಡನ ಜರಾಕ್ಸ್ ಪ್ರತಿ |
| ನಿಪಿ-11 | : | ವೈದ್ಯಕೀಯ ಬಿಲ್ಲು |
| ನಿಪಿ-12 | : | ರೇಡಿಯೋಲಾಜಿ ವರದಿ |
| ನಿಪಿ-13 | : | ಅಡ್ವಾನ್ಸ ರಶೀದಿ |
| ನಿಪಿ-14 | : | ಒಟ್ಟು 45 ವೈದ್ಯಕೀಯ ರಶೀದಿಗಳು |
| ನಿಪಿ-15 | : | ಒಟ್ಟು 32 ವೈದ್ಯಕೀಯ ಸಲಹಾ ಚೀಟಿಗಳು |
| ನಿಪಿ-16 | : | ಅಂಗನ್ಯೂನ್ಯತೆ ಪ್ರಮಾಣ ಪತ್ರ |
| ನಿಪಿ-16(ಎ) | : | ಪಿಡಬ್ಲ್ಯೂ - 2 ರವರ ಸಹಿ |
| ನಿಪಿ-17 | : | ಕ್ಷ-ಕಿರಣ |
| ನಿಪಿ-18 | : | ವಿಮಾ ಪಾಲಸಿಯ ಪ್ರತಿ |

4. ಎದುರುದಾರರ ಪರ ಹಾಜರುಪಡಿಸಿದ ದಾಖಲಾತಿಗಳ ಪಟ್ಟಿ

- - ಏನೂ ಇಲ್ಲಾ - -

ಹಿರಿಯ ಸಿವಿಲ್ ಮತ್ತು ಎಂ ಎ ಸಿ ಟಿ
ನ್ಯಾಯಾಧೀಶರು, ಶಿಗ್ಗಾಂವ.
ಪೀಠಾಸೀನ ಸ್ಥಳಃ ಸವಣೂರು.

glm*